2019 ಕ.ತೀ.ವ 971

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಶ್ರೀಮತಿ ನೀಲವ್ವ –ವಿರುದ್ಧ– ಶ್ರೀಮತಿ ದ್ರಾಕ್ಷಾಯಣಿ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ 100ನೇ ಪ್ರಕರಣದ ಕ್ರಮಾದೇಶ XLI ನಿಯಮ 01 ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ಮೇಲ್ಮನವಿದಾರರು ದಾವಾ ಸ್ವತ್ತಿನಲ್ಲಿ 1/3ನೇ ಭಾಗವು ತಮಗೆ ಬರಬೇಕೆಂದು ಅಧಿವಿಚಾರಣಾ ನ್ಯಾಯಾಲಯದಲ್ಲಿ ಎದುರುದಾರರ ವಿರುದ್ಧ ದಾವೆಯನ್ನು ಹೂಡಿರುತ್ತಾರೆ. ಎದುರುದಾರರು ದಾವೆಯು ವಜಾಗೊಳಿಸಲು ಅರ್ಹವೆಂದು ನಿರೂಪಿಸಿರುವರೆಂದು ದಾವೆಯು ವಜಾಗೊಳಿಸಲ್ಪಡುತ್ತದೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಮೊದಲನೇ ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಮೇಲ್ಮನವಿಯು ವಜಾಗೊಳಿಸಲ್ಪಡುತ್ತದೆ. ಮೊದಲನೇ ಮೇಲ್ಮನವಿ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ದಾವೆಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 7 ಕ್ರಮಾದೇಶ 11ರಡಿಯಲ್ಲಿ ಅಧಿವಿಚಾರಣಾ ನ್ಯಾಯಾಲಯವು ತಿರಸ್ಕರಿಸಿಲ್ಲ. ದಾವೆಯನ್ನು ನ್ಯಾಯ ಸಮ್ಮತವಾಗಿ ಅಧಿವಿಚಾರಣಾ ನ್ಯಾಯಾಲಯವು ಬಗೆಹರಿಸಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಎರಡೂ ಕೆಳ ನ್ಯಾಯಾಲಯಗಳ ತೀರ್ಪನ್ನು ಬದಿಗಿರಿಸಿ, ಸದರಿ ಮೇಲ್ಮನವಿಯನ್ನು ಪುರಸ್ಕರಿಸಿದೆ.

*ಎರಡನೇ ನಿಯಮಿತ ಅಪೀಲು ಸಂಖ್ಯೆ: 100104/2016 ಪಿಎಆರ್/ಎಸ್ಇಪಿ.ಪಿಓಎಸ್ಎಸ್ಎನ್ ದಿನಾಂಕ: 29ನೇ ಜೂನ್, 2019

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. ಎಐಆರ್ 1964 ಎಸ್‌ಸಿ 1810* | |
| *ಗುರುಬಕ್ಸ ಸಿಂಗ್ –ವಿರುದ್ಧ– ಭೂರಲಾಲ್* | *(ಉಲ್ಲೇ) 9* |
| *2. (1997) 1 ಎಸ್‌ಸಿಸಿ 99* | |
| *ಬೆಂಗಾಲ್ ವಾಟರ್ ಪ್ರೂಫ್ ಲಿಮಿಟೆಡ್ –ವಿರುದ್ಧ–* | |
| *ಬಾಂಬೆ ವಾಟರ್ ಪ್ರೂಫ್ ಎಂಎಫ್‌ಜಿ. ಕಂ.,* | *(ಉಲ್ಲೇ) 10* |
| *3. 2011(1) ಕೆಎಆರ್ ಎಲ್.ಜೆ.303* | |
| *ಅಲಮೆನ್‌ಗದಾ ಮುದ್ದಪ್ಪ –ವಿರುದ್ಧ–* | |
| *ಅಲಮೆನ್‌ಗದಾ ಕುಟ್ಟಪ್ಪ,* | *(ಉಲ್ಲೇ) 13* |
| *4. (1976) 4 ಎಸ್‌ಸಿಸಿ 780* | |
| *ಸೈಯದ್ ಮಹಮ್ಮದ್ ಸಲಿ ಲಬ್ಬಾಯ್(ಮೃತ)* | |
| *ವಾರಸುದಾರರಿಂದ ಪ್ರತಿನಿಧಿತ –ವಿರುದ್ಧ–* | |
| *ಮಹಮ್ಮದ್ ಹನಿಫ್ ಮೃತ* | |
| *ವಾರಸುದಾರರಿಂದ ಪ್ರತಿನಿಧಿತ* | *(ಉಲ್ಲೇ) 14* |
| *5. (2004) 1 ಎಸ್‌ಸಿಸಿ 551* | |
| *ವಿ. ರಾಜೇಶ್ವರಿ (ಶ್ರೀಮತಿ) –ವಿರುದ್ಧ–* | |
| *ಟಿ.ಸಿ. ಸರವಣಬವ* | *(ಉಲ್ಲೇ) 16* |
| *6. (2004) 3 ಎಸ್‌ಸಿಸಿ 277* | |
| *ಕುನ್‌ಜನ್ ನಾಯರ್ ಸಿವರಾಮನ್ ನಾಯರ್–ವಿರುದ್ಧ–* | |
| *ನಾರಾಯಣನ್ ನಾಯರ್ ಮತ್ತು ಇತರರು,* | *(ಉಲ್ಲೇ) 17* |


ಅಪೀಲುದಾರರ ಪರ: ಶ್ರೀ ಬಿ.ಎಸ್. ಕಮಟೆ – ವಕೀಲರು;
1 ಮತ್ತು 3ನೇ ಪ್ರತ್ಯಪೀಲುದಾರರ ಪರ:ಶ್ರೀ ಆರ್.ವಿ. ಇಟಗಿ, ಶ್ರೀ ಎಸ್.ಸಿ. ಹರಟಿ ಮತ್ತು ಶ್ರೀ ಪಿ.ಜಿ. ಕುಲಕರ್ಣಿ – ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಕೃಷಿ ಭೂಮಿಯ ಭಾಗ ಮತ್ತು ಪ್ರತ್ಯೇಕ ಸ್ವಾಧೀನಕ್ಕಾಗಿ ದಾವೆಯಲ್ಲಿರುವಂತೆ ಇದು ವಾದಿಗಳ ಎರಡನೇ ಅಪೀಲಾಗಿದೆ. ಅನುಕೂಲಕ್ಕಾಗಿ, ಪಕ್ಷಕಾರರನ್ನು, ದಾವೆಯಲ್ಲಿರುವಂತೆ ಉಲ್ಲೇಖಿಸಲಾಗಿದೆ.

2. ಈ ಸಂಕ್ಷಿಪ್ತ ಸಂಗತಿಗಳು, ಈ ಅಪೀಲನ್ನು ತೀರ್ಮಾನಿಸುವುದಕ್ಕೆ ಅಗತ್ಯವಾಗಿದ್ದು, ಈ ಮುಂದಿನಂತೆ ಅವುಗಳನ್ನು ಪುನಃ ಹೇಳಲಾಗಿದೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ಇರುವ ಒಳಸಂಬಂಧಗಳು ಇದರಡಿಯಲ್ಲಿರುವಂತೆ ವಿವಾದವಾಗಿರುವುದಿಲ್ಲ.



ವಾದಿಯು, ಓ.ಎಸ್. ಸಂ. 249/2000ರಲ್ಲಿ ಪ್ರತಿವಾದಿಗಳ ವಿರುದ್ಧ ದಾವೆ ಹೂಡಿದ್ದು, (ಇದರಲ್ಲಿ ಇನ್ನು ಮುಂದೆ ಮೊದಲನೇ ದಾವೆ ಎಂದು ಉಲ್ಲೇಖಿಸಲಾಗಿದೆ) ಸಂ. 31/1+2+3+4ಎ ಹೊಂದಿದ ಸ್ವತ್ತಿನಲ್ಲಿ 1/3ನೇ ಭಾಗ ಮತ್ತು ಸರ್ವೆ ನಂ. 337ರಲ್ಲಿ 1 ಎಕರೆ 31 ಗುಂಟೆಗಳನ್ನು ಹೊಂದಿರುವ ಇತರೇ ಭೂಮಿಯ ಸ್ವತ್ತು ಮತ್ತು ಧಾರವಾಡದಲ್ಲಿರುವ ಸಂ. 614 ಹಾಗೂ 516/10ನ್ನು ಹೊಂದಿದ ಗೃಹಸ್ವತ್ತಿನ ಸಂಬಂಧದಲ್ಲಿ ಭಾಗ ಮತ್ತು ಪ್ರತ್ಯೇಕ ಸ್ವಾಧೀನದ ಡಿಕ್ರಿ ಮಾಡುವಂತೆ ಕೋರಿ ದಾವೆಯನ್ನು ಹೂಡಿರುತ್ತಾಳೆ. ಅಧಿವಿಚಾರಣೆಯ ತರುವಾಯ, ಸಂ. 31/ 1+2+3+4ಬಿ ಹೊಂದಿದ ಸ್ವತ್ತಿನ ಸಂಬಂಧದಲ್ಲಿ ದಾವೆಯನ್ನು ಡಿಕ್ರಿ ಮಾಡಲಾಗಿದೆ ಮತ್ತು ಇತರೇ ಸ್ವತ್ತಿನ ಸಂಬಂಧದಲ್ಲಿ ದಾವೆಯನ್ನು ವಜಾಗೊಳಿಸಲಾಗಿದೆ. ಸದರಿ ಡಿಕ್ರಿಯನ್ನು ಟೀಕಿಸಿ, 1ನೇ ಪ್ರತಿವಾದಿಯು, ಆರ್.ಎ. ಸಂ. 99/2007ನ್ನು ದಾಖಲು ಮಾಡಿದ್ದಾಳೆ. ದಿನಾಂಕ: 10.02.2010ರ ತೀರ್ಪಿನ ಮೂಲಕ ಈ ಅಪೀಲನ್ನು ಪುರಸ್ಕರಿಸಲಾಗಿದೆ ಮತ್ತು ದಾವೆಯನ್ನು ವಜಾಗೊಳಿಸಲಾಗಿದೆ. ಸದರಿ ಡಿಕ್ರಿಯನ್ನು ಟೀಕಿಸಿ, ವಾದಿಯು, ಆರ್.ಎಸ್.ಎ. ಸಂ.5343/2010ನ್ನು ದಾಖಲು ಮಾಡಿದ್ದಾಳೆ. ವಾದ ಪತ್ರದ ತಿದ್ದುಪಡಿ ಕೋರಿ ಅರ್ಜಿಯನ್ನು, ಸಂ. 31/ 1+2+3+4ಬಿ ಹೊಂದಿದ ಸ್ವತ್ತಿನ ಸೇರ್ಪಡೆಗಾಗಿ, ಸಂ. 31/1+2+3+4ಎ ಅನ್ನು ಹೊಂದಿದ ಸ್ವತ್ತಿನ ಬದಲಾಗಿ, ದಾಖಲು ಮಾಡಲಾಗಿದೆ. ದಿನಾಂಕ: 06.09.2013ರ ತೀರ್ಪಿನ ಮೂಲಕ, ಅರ್ಜಿ ಮತ್ತು ಅಪೀಲು ಎರಡನ್ನು ವಜಾಗೊಳಿಸಲಾಗಿದೆ. ಎಸ್.ಎಲ್.ಪಿ. (ಸಿವಿಲ್) ಸಂ. 1223/2016ನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು, ದಿನಾಂಕ: 05.01.2016ರಂದು ಅದನ್ನು ಸಹಾ ವಜಾಗೊಳಿಸಲಾಗಿದೆ.

3. ದಿನಾಂಕ 11.07.2014ರಂದು, ವಾದಿಯು, ಓ.ಎಸ್. ಸಂ. 277/2014ನ್ನು ದಾಖಲು ಮಾಡಿದ್ದು, (ಇದರಲ್ಲಿ ಇನ್ನು ಮುಂದೆ ಎರಡನೇ ದಾವೆಯೆಂದು ಉಲ್ಲೇಖಿಸಲಾಗಿದೆ). ಸಂ. 31/1+2+3+4ಬಿ ಹೊಂದಿದ ಸ್ವತ್ತಿನ ಸಂಬಂಧದಲ್ಲಿ ಭಾಗ ಮತ್ತು ಪ್ರತ್ಯೇಕ ಸ್ವಾಧೀನದ ಡಿಕ್ರಿ ಮಾಡುವಂತೆ ಕೋರಿದ್ದಾಳೆ. 1ನೇ ಪ್ರತಿವಾದಿಯು, ಸಿಪಿಸಿಯ ಕ್ರಮಾದೇಶ **II** ನಿಯಮ 2ರ ಮೇರೆಗೆ ಐ.ಎ.2ನ್ನು ದಾಖಲು ಮಾಡಿದ್ದಾರೆ ಮತ್ತು ಮೇಲೆ ಹೇಳಲಾದ ಹಿಂದಿನ ದಾವೆಯ

ವ್ಯವಹರಣೆಗಳನ್ನು ಉಲ್ಲೇಖಿಸುವುದರ ಮೂಲಕ, ಊರ್ಜಿತ ಯೋಗ್ಯವಾಗಿರದ ದಾವೆಯನ್ನು ವಜಾಗೊಳಿಸಲು ಕೋರಿದ್ದಾರೆ. ಆಕ್ಷೇಪಣೆಗಳ ಹೇಳಿಕೆಯನ್ನು ದಾಖಲಿಸುವುದರ ಮೂಲಕ, ಅರ್ಜಿಯನ್ನು, ವಾದಿಯು ವಿರೋಧಿಸಿದ್ದಾಳೆ. ಪರಿಗಣನೆಗಾಗಿ ಅಧಿವಿಚಾರಣಾ ನ್ಯಾಯಾಲಯವು, 1ನೇ ಪ್ರತಿವಾದಿಯು, ದಾವೆಯನ್ನು ವಜಾಗೊಳಿಸುವುದಕ್ಕಾಗಿ ಕಾರಣಗಳನ್ನು ನೀಡಿದ್ದಾಳೆಯೇ? ಎಂಬ ಈ ಅಂಶವನ್ನು ಎತ್ತುವ ಮೂಲಕ ಆದೇಶ ದಿನಾಂಕ: 23.04.2015ರ ಮೂಲಕ ಐ.ಎ. 2ನ್ನು ಅಂಗೀಕರಿಸಲಾಗಿದೆ ಮತ್ತು ದಾವೆಯು ಊರ್ಜಿತವಾಗಿಲ್ಲವೆಂದು ವಜಾಗೊಳಿಸಲಾಗಿದೆ. ಸದರಿ ಆದೇಶವನ್ನು ಟೀಕಿಸಿ ಆರ್.ಎ. ಸಂ. 77/2015ನ್ನು ಜಿಲ್ಲಾ ನ್ಯಾಯಾಲಯ ಧಾರವಾಡದಲ್ಲಿ ದಾಖಲು ಮಾಡಲಾಗಿದೆ. ಅದರ ತೀರ್ಪು ದಿನಾಂಕ 27.11.2015ರ ಮೂಲಕ, ಸಿಪಿಸಿಯ ಕ್ರಮಾದೇಶ II ನಿಯಮ 2ರ ಮೂಲಕ, ದಾವೆಯು ಗುಣಾರ್ಹತೆ ಹೊಂದಿಲ್ಲವೆಂದು ಮತ್ತು ಅಪೀಲನ್ನು ವಜಾಗೊಳಿಸಲಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಈ ಎರಡನೇ ಅಪೀಲು ಸದರಿ ಆದೇಶ ಮತ್ತು ಡಿಕ್ರಿಯ ವಿರುದ್ಧ ನಿರ್ದೇಶಿಸಲಾಗಿದೆ.

4. ಈ ಅಪೀಲನ್ನು ಈ ಮುಂದಿನ ಕಾನೂನಿನ ಮುಖ್ಯ ಪ್ರಶ್ನೆಗಳನ್ನು ಪರಿಗಣಿಸಲು ಅಂಗೀಕರಿಸಲಾಗಿದೆ:–

*(1) ಕೆಳ ನ್ಯಾಯಾಲಯಗಳು, ಸಿಪಿಸಿಯ ಕ್ರಮಾದೇಶ II ನಿಯಮ 2ರ ಮೂಲಕ ಪ್ರತಿಷೇಧಿಸಲಾದ ದಾವೆಗೆ ಸಂಬಂಧಪಟ್ಟಂತೆ ಎದುರುದಾರರಿಂದ ವಾದಪತ್ರ ಇಲ್ಲದಿರುವಲ್ಲಿ ಮತ್ತು ಅದರ ಮೇಲೆ ವಿಷಯ ಇಲ್ಲದಿರುವಲ್ಲಿ, ಅನುಕ್ರಮವಾಗಿ ದಾವೆ ಮತ್ತು ಅಪೀಲನ್ನು ವಜಾಗೊಳಿಸಿರುವುದು ಸಮರ್ಥನೀಯವಾಗಿದೆಯೇ?*

*(2) ಸಿಪಿಸಿಯ ಕ್ರಮಾದೇಶ II ನಿಯಮ 2ರ ಅಡಿಯಲ್ಲಿ ಪ್ರತಿಷೇಧಿಸಿರುವುದು, ಮೊದಲನೇ ದಾವೆಯ ವಸ್ತು ವಿಷಯಕ್ಕೊಳಪಡದಿರುವ, ವಿವಿಧ ವ್ಯಾಜ್ಯ ಕಾರಣಗಳ ಉಲ್ಲೇಖದೊಂದಿಗೆ ಎರಡನೇ ಅಪೀಲನ್ನು, ಸ್ವತ್ತಿನ ಸಂಬಂಧದಲ್ಲಿ ಪರಿಹಾರ ಮಂಜೂರಾತಿಗಾಗಿ ಹೂಡಲಾಗಿರುವುದಕ್ಕೆ ಅನ್ವಯವಾಗುತ್ತದೆಯೇ?*

*(3) ಎರಡನೇ ದಾವೆಯನ್ನು, ಸಿಪಿಸಿಯ 11ನೇ ಪ್ರಕರಣದ ಪ್ರಕಾರ ಪೂರ್ವನ್ಯಾಯದ ನಿಯಮಗಳ ಮೂಲಕ ಪ್ರತಿಷೇಧಿಸಲಾಗಿದೆಯೇ?*

*(4) ಅಧಿವಿಚಾರಣೆ ಮಾಡದ ದಾವೆಯನ್ನು ವಜಾಗೊಳಿಸಿದ್ದನ್ನು ಅನುಮತಿಸಲಾಗಿದೆಯೇ?*

5. ಮೊದಲನೆಯ ದಾವೆಯ ವಸ್ತು–ವಿಷಯವು ಎರಡನೇ ದಾವೆಯ ವಸ್ತು ವಿಷಯವಾಗಿರುವುದಿಲ್ಲ ಮತ್ತು ವಿಷಯ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯನಿರ್ಣಯವಿಲ್ಲದ ಕಾರಣ ಕೆಳ ನ್ಯಾಯಾಲಯಗಳು ಸಿಪಿಸಿಯ ಕ್ರಮಾದೇಶ 11 ನಿಯಮ 2ರ ವ್ಯಾಪ್ತಿ ಮತ್ತು ಎಲ್ಲೆಯನ್ನು ತಪ್ಪು ತಿಳಿದುಕೊಂಡಿವೆ ಎಂದು ಮಾನ್ಯ ವಕೀಲರಾದ ಶ್ರೀ ಟಿ.ಎಸ್. ಕಮಟೆರವರು ವಾದ ಮಂಡಿಸಿದ್ದಾರೆ. ಸಿಪಿಸಿಯ ಕ್ರಮಾದೇಶ II ನಿಯಮ 2ರಲ್ಲಿ ಇರುವಂತೆ IIನೇ ಪ್ರಕರಣದ ಮೂಲಕ ಎರಡನೇ ದಾವೆಯನ್ನು ಪಡೆದುಕೊಂಡ ಆಧಾರದ ಮೇಲೆ ಮತ್ತು ಎರಡನೇ ದಾವೆ ವಸ್ತು ವಿಷಯವಾಗಿದ್ದರೂ, ಮೊದಲನೇ ದಾವೆಯು ವಸ್ತು–ವಿಷಯವಾಗಿರುವುದಿಲ್ಲವೆಂಬ ಕಾರಣದ ಮೇಲೆ, ಕೆಳ ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯ ಮಾಡಿದ ಆದೇಶವನ್ನು ಸ್ಥಿರೀಕರಿಸುವುದರ ಮೂಲಕ ತಪ್ಪು ಮಾಡಿದೆಯೆಂದು ಅವರು ವಾದಿಸಿದ್ದಾರೆ.

6. ಆರ್.ಎ. ಸಂಖ್ಯೆ: 99/2007 ಮತ್ತು ಆರ್‌ಎಸ್‌ಎ ಸಂ. 5343/2010ರಲ್ಲಿ ಮಾಡಿದ ತೀರ್ಪುಗಳಲ್ಲಿ ದಾಖಲಿಸಿದ ನಿರ್ಣಯಗಳಿಗೆ ಸಂಬಂಧಪಟ್ಟಂತೆ, ಎರಡನೇ ದಾವೆಯನ್ನು ಪೂರ್ವನ್ಯಾಯದ ನಿಯಮಗಳ ಮೂಲಕ ಪಡೆದುಕೊಳ್ಳಲಾಗಿದೆ ಮತ್ತು ಸಿಪಿಸಿಯ ಕ್ರಮಾದೇಶ II ನಿಯಮ 2ರ ಅಡಿಯಲ್ಲಿ ಪ್ರತಿಷೇಧಿಸಿದ್ದೂ ಕೂಡ ಅನ್ವಯವಾಗಿರುವುದರಿಂದ ಕೆಳ ನ್ಯಾಯಾಲಯಗಳು ಅನುಕ್ರಮವಾಗಿ ಪ್ರಶ್ನಿತ ಆದೇಶ ಮತ್ತು ತೀರ್ಪು ಮಾಡಿರುವುದನ್ನು ಸಮರ್ಥಿಸಿಕೊಂಡಿವೆ ಮತ್ತು ಗುಣಾರ್ಹತೆ ಇಲ್ಲದಿರುವುದರಿಂದ ಈ ಅಪೀಲು ವಜಾಗೊಳ್ಳುವುದಕ್ಕೆ ಗುರಿಯಾಗುತ್ತದೆ ಎಂದು, ಬೇರೊಂದು ರೀತಿಯಲ್ಲಿ ಮಾನ್ಯ ವಕೀಲರಾದ ಶ್ರೀ ಆರ್.ವಿ. ಇಟಗಿರವರು ವಾದ ಮಂಡಿಸಿದ್ದಾರೆ.

7. ಪರಸ್ಪರರ ವಾದಗಳನ್ನು ಪರಿಗಣಿಸಲಾಗಿದೆ ಮತ್ತು ಪರಿಗಣನೆಗಾಗಿ ಇರುವ ಸಂಕ್ಷಿಪ್ತ ಪ್ರಶ್ನೆಯೆಂದರೆ, ಸಿಪಿಸಿಯ ಕ್ರಮಾದೇಶ II ನಿಯಮ 2(2)ರ ಉಪಬಂಧದಲ್ಲಿ ಪ್ರತಿಷೇಧಿಸಿರುವಂತೆ ಎರಡನೇ ದಾವೆಯನ್ನು ವಜಾಗೊಳಿಸಿದ್ದನ್ನು ಸಮರ್ಥಿಸಿಕೊಳ್ಳಲಾಗಿದೆಯೇ?

8. ಸಿಪಿಸಿಯ ಕ್ರಮಾದೇಶ II ನಿಯಮ 2ರ ಉದ್ದೇಶವು, ಮೊದಲನೇಯದಾಗಿ, ಪ್ರತಿವಾದಿ ದಾವೆ ಹೂಡಿರುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವುದು ಮತ್ತು ಅದೇ ವ್ಯಾಜ್ಯ ಕಾರಣಕ್ಕೆ ಸಂಬಂಧಿಸಿದಂತೆ ಎರಡೂ ಬಾರಿ ವಿವಾದಗ್ರಸ್ಥವಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು ಮತ್ತು ಎರಡನೇಯದಾಗಿ, ಕ್ಲೇಮುಗಳನ್ನು ವಿಭಜಿಸುವುದರಿಂದ ವಾದಿಯನ್ನು ತಡೆಯಯುವುದು ಮತ್ತು ಪರಿಹಾರಗಳು ಅದೇ ವ್ಯಾಜ್ಯ ಕಾರಣದ ಮೇಲೆ ಆಧಾರವಾಗಿದೆವೆಂಬುದನ್ನು ಖಚಿತಪಡಿಸಿಕೊಳ್ಳುವುದು. ಹಾಗಾಗಿ, ಸಿಪಿಸಿಯ ಕ್ರಮಾದೇಶ II ನಿಯಮ 2, ಅದೇ ವ್ಯಾಜ್ಯ ಕಾರಣದ ಮೇಲೆ, ಇತರೇ ಪರಿಹಾರ(ಗಳು) ಗಳಿಗೆ ಸಂಬಂಧಪಟ್ಟಂತೆ ಎರಡನೇ ದಾವೆಯನ್ನು ದಾಖಲು ಮಾಡುವುದರಿಂದ ವ್ಯಾಜ್ಯ ಕಾರಣಕ್ಕೆ ಸಂಬಂಧಪಟ್ಟಂತೆ ಮುಂಚೆಯೇ ಕ್ಲೇಮು ಮಾಡಲಾದ ಕೆಲವೊಂದು ಪರಿಹಾರಗಳಿಂದ ವಾದಿಯನ್ನು ಪ್ರತಿಷೇಧಿಸಿದೆ.

9. ***ಗುರುಬಕ್ಸ್ ಸಿಂಗ್ -ವಿರುದ್ಧ- ಭೂರಲಾಲ್***[1], 11ನೇ ಪ್ರಕರಣ ಮತ್ತು ಸಿಪಿಸಿಯ ಕ್ರಮಾದೇಶ II ನಿಯಮ 2ರ ಅಡಿಯಲ್ಲಿ ಪ್ರತಿಷೇಧಿತ ವಾದವನ್ನು ಎತ್ತುವುದರ ಮೂಲಕ ಉತ್ತರವರ್ತಿಗೆ ಪ್ರತಿವಾದಿಯಿಂದ ರುಜುವಾತುಪಡಿಸುವುದು ಅಗತ್ಯವಾಗಿದೆ ಮತ್ತು ಅದನ್ನು ಈ ಮುಂದಿನಂತೆ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ:

> "6. ಆದೇಶದಲ್ಲಿರುವಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ II ನಿಯಮ 2(3)ರ ಅಡಿಯಲ್ಲಿ ಪ್ರತಿಷೇಧಿಸಿದ ವಾದವು

1. ಎಐಆರ್ 1964 ಎಸ್‌ಸಿ 1810

ಪ್ರತಿವಾದಿಯು ಉತ್ತರವರ್ತಿಯಾಗತಕ್ಕದ್ದು ಮತ್ತು ವಾದವನ್ನು ಎತ್ತುವವನು ಕಡ್ಡಾಯವಾಗಿ ಗಮನಿಸತಕ್ಕದ್ದು ಎಂದಾಗಿರುತ್ತದೆ: (1) ಎರಡನೇ ದಾವೆಯು, ಹಿಂದಿನ ದಾವೆಯ ಆಧಾರದ ಅದರ ಮೇಲಿರುವಂತೆ ಅದೇ ವ್ಯಾಜ್ಯ ಕಾರಣದ ಸಂಬಂಧದಲ್ಲಿದೆ; (2) ವಾದಿಯು, ವ್ಯಾಜ್ಯ ಕಾರಣದ ಸಂಬಂಧದಲ್ಲಿ, ಒಂದಕ್ಕಿಂತ ಹೆಚ್ಚು ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆ; (3) ಹೀಗಾಗಿ, ವಾದಿಯು ಒಂದಕ್ಕಿಂತ ಹೆಚ್ಚು ಪರಿಹಾರಕ್ಕೆ ಹಕ್ಕುಳ್ಳವನಾಗಿರುವುದರಿಂದ, ನ್ಯಾಯಾಲಯದಿಂದ ಅನುಮತಿ ಪಡೆಯದೇ ಪರಿಹಾರಕ್ಕಾಗಿ ಎರಡನೇ ದಾವೆಯನ್ನು ಹೂಡಲು ಬಿಡಲಾಗಿದೆ. ಅದರೆ ಈ ವಿಶ್ಲೇಷಣೆಯಿಂದ, ಪ್ರತಿವಾದಿಯು, ಪ್ರಾರಂಭದಲ್ಲಿ ರುಜುವಾತುಪಡಿಸಬೇಕಾಗಿರುವುದೇನೆಂದರೆ, ಮತ್ತು ಮೊದಲನೆಯದಾಗಿ ದಾಖಲು ಮಾಡಿದ ಹಿಂದಿನ ದಾವೆಯ ಮೇಲೆ ನಿಷ್ಕೃಷ್ಟ ವ್ಯಾಜ್ಯ ಕಾರಣದ ಮೇಲೆ, ಅದರ ಹೊರತಾಗಿ, ದಾಖಲು ಮಾಡಿದ ಈ ಮುಂಚಿನ ದಾವೆಯ ಮೇಲೆ ವ್ಯಾಜ್ಯ ಕಾರಣದ ನಡುವೆ ಗುರುತಿಸಲಾಗಿದೆ ಮತ್ತು ತರುವಾಯದ ದಾವೆಯಲ್ಲಿರುವ ಕ್ಲೇಮುವಿನ ಮೇಲೆ ಆಧಾರವಾಗಿದ್ದು, ಪ್ರತಿಷೇಧಿಸಿದ ಅರ್ಜಿಯ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂಬುದು ಕಂಡುಬಂದಿದೆ. ಸಂದೇಹವಿಲ್ಲದೇ, ಪರಿಹಾರವನ್ನು ವಾದ ಪತ್ರದಲ್ಲಿ ಕೋರಿದ್ದನ್ನು ಸಾಮಾನ್ಯವಾಗಿ ನಿರ್ದಿಷ್ಟ ವ್ಯಾಜ್ಯ ಕಾರಣದಲ್ಲಿ ಕಾಣಬಹುದು. ಆದರೆ ಯಾವುದೇ ಅರ್ಥದಲ್ಲಿ ಅದು ಸರ್ವವ್ಯಾಪ್ತಿ ನಿಯಮವಾಗಲಾರದು. ವಾದವು ತಾಂತ್ರಿಕ ಪ್ರತಿಷೇಧವಾಗಿರುವುದರಿಂದ ಅದನ್ನು ತೃಪ್ತಿಕರವಾಗಿ ರುಜುವಾತುಪಡಿಸಬೇಕಾಗಿದೆ ಮತ್ತು ಕೇವಲ ಅನುಮತಿ ನಿರ್ಣಯದ ಆಧಾರದ ಮೇಲೆ ಪೂರ್ವಭಾವನೆ ಮಾಡಲಾಗದು. ಅದನ್ನು ಈ ಕಾರಣಕ್ಕಾಗಿ, ಸಿಪಿಸಿಯ ಕ್ರಮಾದೇಶ II ನಿಯಮ 2ರ ಅಡಿಯಲ್ಲಿ ಪ್ರತಿಷೇಧಿಸಲಾದ ವಾದವನ್ನು, ಹಿಂದಿನ ದಾವೆಯಲ್ಲಿ ವಾದಿಸಿರುವಂತೆ, ಪ್ರತಿವಾದಿಯು ಸಾಕ್ಷ್ಯದಲ್ಲಿ ದಾಖಲು ಮಾಡಿದ್ದಲ್ಲಿ ಮಾತ್ರ ರುಜುವಾತು

ಪಡಿಸಬಹುದು ಮತ್ತು ಈ ಎರಡೂ ದಾವೆಗಳಲ್ಲಿ ವ್ಯಾಜ್ಯ ಕಾರಣವನ್ನು ಗುರುತಿಸಿ ಈ ನ್ಯಾಯಾಲಯಕ್ಕೆ ಈ ಮೂಲಕ ರುಜುವಾತು ಪಡಿಸಲಾಗಿದೆಯೆಂಬುದನ್ನು ನಾವು ಪರಿಗಣಿಸಿದ್ದೇವೆ."

(ಒತ್ತಿ ಹೇಳಲಾಗಿದೆ)

ಸಿಪಿಸಿಯ ಕ್ರಮಾದೇಶ II ನಿಯಮ 2ರ ಅಡಿಯಲ್ಲಿ ಪ್ರತಿಷೇಧಿಸಿದ ಪ್ರತಿವಾದಿಯ ವಾದಪತ್ರಗಳನ್ನು ಹೊರತುಪಡಿಸಲಾಗಿದೆ ಮತ್ತು ವಿವಾದಾಂಶವು, ದಾವೆಯನ್ನು ಪ್ರತಿಷೇಧಿಸಿರುವಂತೆ ಪಕ್ಷಕಾರರನ್ನು ಕೇಂದ್ರಿಕರಿಸಿದ್ದು, ಈ ನ್ಯಾಯಾಲಯ ಇದನ್ನು ಪರೀಕ್ಷಿಸಿರುವುದಿಲ್ಲ ಮತ್ತು ಸಿಪಿಸಿಯ ಕ್ರಮಾದೇಶ II ನಿಯಮ 2ರ ಅಡಿಯಲ್ಲಿ ಪ್ರತಿಷೇಧಿಸಿದ ಕಾರಣದ ಮೇಲೆ ದಾವೆಯನ್ನು ತಿರಸ್ಕರಿಸಲಾಗಿದೆಯೆಂಬುದು ಅದರ ಸದರಿ ತೀರ್ಪಿನಿಂದ ಸ್ಪಷ್ಟವಾಗುತ್ತದೆ. ಮೇಲೆ ಹೇಳಲಾದ ತೀರ್ಪಿನಿಂದ ಸ್ಪಷ್ಟವಾಗುವುದೇನೆಂದರೆ, ಈ ಮುಂಚಿನ ದಾವೆಯಲ್ಲಿನ ವಾದ-ಪ್ರತಿವಾದ ಪತ್ರಗಳನ್ನು ಸಮ್ಮತಿ ಮೂಲಕ ಪ್ರದರ್ಶಿಸತಕ್ಕದ್ದು ಅಥವಾ ಗುರುತಿಸತಕ್ಕದ್ದು ಅಥವಾ ಕೊನೆಯ ಪಕ್ಷ ಉಭಯ ಪಕ್ಷಕಾರರು ಒಪ್ಪತಕ್ಕದ್ದು. ಅಂದರೆ, ಅವಕಾಶ ನೀಡುವುದರ ಮೂಲಕ, ಎರಡನೇ ದಾವೆಯನ್ನು, ವಿಭಿನ್ನ ಮತ್ತು ವಿವಿಧ ವ್ಯಾಜ್ಯ ಕಾರಣದ ಆಧಾರದ ಮೇಲೆ ವಿವರಿಸಲು ಅಥವಾ ತೋರಿಸಲು ವಾದಿಯನ್ನು ಆದೇಶದಲ್ಲಿರುವಂತೆ ಸಮರ್ಥಗೊಳಿಸುವುದು.

10. ***ಬೆಂಗಾಲ್ ವಾಟರ್ ಪ್ರೂಫ್ ಲಿಮಿಟೆಡ್-ವಿರುದ್ಧ-ಬಾಂಬೆ ವಾಟರ್ ಪ್ರೂಫ್ ಎಂಎಫ್‌ಜಿ. ಕಂ.,***[2] ಸರ್ವೋಚ್ಚ ನ್ಯಾಯಾಲಯವು, ಸಿಪಿಸಿಯ ಕ್ರಮಾದೇಶ II ನಿಯಮ 2(3)ರ ಅಡಿಯಲ್ಲಿ ಪ್ರತಿಷೇಧಿಸಿದ ವಾದವನ್ನು ಪರಿಗಣಿಸುವಾಗ, ತರುವಾಯದ ದಾವೆಯಲ್ಲಿ ಪರಿಹಾರ ಕ್ಲೇಮಿಗೆ ಸಂಬಂಧಪಟ್ಟಂತೆ, ವಾದವು, ಎರಡೂ ದಾವೆಗಳಲ್ಲಿ ವ್ಯಾಜ್ಯ ಕಾರಣವನ್ನು ಗುರುತಿಸಿ ರುಜುವಾತುಪಡಿಸಲು

2. (1997) 1 ಎಸ್‌ಸಿಸಿ 99

ಹಿಂದಿನ ದಾವೆಯಲ್ಲಿರುವ ವಾದ–ಪ್ರತಿವಾದ ಪತ್ರಗಳು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸಾಕ್ಷ್ಯದಲ್ಲಿರುವಂತೆ ಪ್ರತಿವಾದಿ ದಾಖಲಿಸಿದ್ದಲ್ಲಿ ಮಾತ್ರ ಊರ್ಜಿತಗೊಳ್ಳಲು ಯೋಗ್ಯವಾಗಿವೆ ಮತ್ತು ಕ್ರಮಾದೇಶ II ನಿಯಮ 2(3)ರಡಿಯಲ್ಲಿ ಪ್ರತಿಷೇಧಿಸಿರುವುದರ ಬಗ್ಗೆ ಅನುಮಾನ ವ್ಯಕ್ತಪಡಿಸಿರುವುದನ್ನು ಕೇವಲ ಎರಡನೇ ದಾವೆಯಲ್ಲಿರುವ ವಾದಪತ್ರದಿಂದ ಮಾಡಲಾಗದು ಎಂದು ತಿಳಿಸುತ್ತದೆ.

11. ವಿವಾದಾಂಶ ಅಥವಾ ಅಂಶಕ್ಕೆ ಉತ್ತರಿಸಲು ವಾದಿಯ ಎರಡನೇ ದಾವೆಯನ್ನು ಸಿಪಿಸಿಯ ಕ್ರಮಾದೇಶ II ನಿಯಮ 2ರಡಿಯಲ್ಲಿ ಪ್ರತಿಷೇಧಿಸಲಾಗಿದೆಯೇ ಎಂದು ತಿಳಿಯಲು ಮತ್ತು ಎರಡು ದಾವೆಯಲ್ಲಿ ಕ್ಲೇಮು ಮಾಡಲಾದ ಪರಿಹಾರ(ಗಳು) ಅದೇ ವ್ಯಾಜ್ಯ ಕಾರಣದಿಂದ ಉದ್ಭವಿಸಿದೆಯೇ ಎಂದು ನ್ಯಾಯಾಲಯವು ನೋಡುವುದು ಅವಶ್ಯಕವಾಗಿದೆ.

12. ಪ್ರಸ್ತುತ ಪ್ರಕರಣದಲ್ಲಿ, ಪ್ರತಿವಾದಿಗಳು, ಲಿಖಿತ ಹೇಳಿಕೆಯನ್ನು ದಾಖಲು ಮಾಡದೇ, ವಿವಾದಾಂಶಗಳನ್ನು ಎತ್ತಿರುವುದಿಲ್ಲ ಮತ್ತು ಅಧಿವಿಚಾರಣೆ ಮಾಡಿರುವುದಿಲ್ಲ. ಮೊದಲನೇ ದಾವೆಯಲ್ಲಿ ಮಾಡಿದ ವಾದ–ಪ್ರತಿವಾದ ಪತ್ರಗಳು, ಸಾಕ್ಷ್ಯ ಮತ್ತು ತೀರ್ಪನ್ನು, ಸಮ್ಮತಿ ಮೂಲಕ ಪ್ರದರ್ಶಿಸಿರುವುದಿಲ್ಲ ಅಥವಾ ಗುರುತಿಸಿರುವುದಿಲ್ಲ. ಈ ಹಿಂದೆ ಮೊದಲನೇ ಅಪೀಲು ಮತ್ತು ಎರಡನೇ ಅಪೀಲಿನಲ್ಲಿ ಮಾಡಿದ ತೀರ್ಪುಗಳು ಮತ್ತು ಡಿಕ್ರಿಗಳನ್ನು ಮಾತ್ರ ಹಾಜರುಪಡಿಸಲಾಗಿದೆ ಮತ್ತು ಹಾಗಾಗಿ, ವಾದಿಗೆ, ಎರಡನೇ ದಾವೆಯ ವಸ್ತು–ವಿಷಯವು ಪ್ರತ್ಯೇಕವಾಗಿದೆ ಮತ್ತು ವಿಭಿನ್ನ ಅಥವಾ ವಿವಿಧ ವ್ಯಾಜ್ಯ ಕಾರಣದ ಆಧಾರದ ಮೇಲೆ ಅವಲಂಬಿತವಾಗಿದೆಯೆಂದು ವಿವರಿಸಲು ಅಥವಾ ತೋರಿಸಲು ಯಾವುದೇ ಅವಕಾಶವನ್ನು ನೀಡಿರುವುದಿಲ್ಲ. ಹಾಗಾಗಿ, ವಾದ–ಪ್ರತಿವಾದ ಪತ್ರದ ಕೊರತೆಯಿಂದ, ಪ್ರತಿವಾದಿಗಳು ಎತ್ತಲಾದ ವಿವಾದಾಂಶ ಮತ್ತು ರುಜುವಾತಿನಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಐ.ಎ.ಸಂಖ್ಯೆ: 2ನ್ನು ಅಂಗೀಕರಿಸಿರುವಾಗ, ಈ ದಾವೆಯನ್ನು ವಜಾಗೊಳಿಸಿ ಕಾನೂನುಬಾಹಿರತೆ ಮಾಡಿದೆ ಮತ್ತು ಮೊದಲನೇ ಅಪೀಲು

ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ತಪ್ಪು ತೀರ್ಮಾನವನ್ನು ಎತ್ತಿ ಹಿಡಿದು ತಪ್ಪು ಮಾಡಿದೆ ಎಂದು ತಿಳಿಸುತ್ತದೆ.

13. ಸಿಪಿಸಿಯ 11ನೇ ಪ್ರಕರಣದ ಪ್ರಕಾರ ಪೂರ್ವನ್ಯಾಯ ನಿರ್ಣಯದ ನಿಯಮಗಳು ಅನ್ವಯವಾಗುವುದಕ್ಕೆ ಸಂಬಂಧಪಟ್ಟಂತೆ, ಪ್ರತಿವಾದಿಯ ವಾದಪತ್ರ ಮತ್ತು ಎತ್ತಲಾದ ಅಂಶದ ಅಗತ್ಯವಿರುತ್ತದೆ ಮತ್ತು ಈ ಮೂಲಕ ಈ ಪ್ರಕರಣವನ್ನು ಮಾಡಲು ವಾದಿಗೆ ಅವಕಾಶ ನೀಡಲಾಗಿದೆ. ಪೂರ್ವನ್ಯಾಯ ನಿರ್ಣಯದ ವಿವಾದಾಂಶವು ಶುದ್ಧ ಕಾನೂನಿನ ಪ್ರಶ್ನೆಯಾಗಿರುವುದಿಲ್ಲ. ಆದರೆ ಕಾನೂನು ಮತ್ತು ಸಂಗತಿಯ ಮಿಶ್ರ ಪ್ರಶ್ನೆಯಾಗಿರುತ್ತದೆ ಮತ್ತು ತಮ್ಮ ವಾದಗಳನ್ನು ಮಂಡಿಸುವುದಕ್ಕೆ ಅವಕಾಶ ನೀಡತಕ್ಕದ್ದು ಮತ್ತು ***ಅಲಮನ್ ಮುದ್ದಪ್ಪ –ವಿರುದ್ಧ– ಅಲಮೆಮನ್ ಕುಟ್ಟಪ್ಪ***[3], ರುಜುವಾತುಪಡಿಸಿರುವುದನ್ನು ಹಾಜರುಪಡಿಸತಕ್ಕದ್ದು.

14. ***ಸೈಯದ್ ಮಹಮ್ಮದ್ ಸಲಿ ಲಬ್ಬಾಯ್(ಮೃತ) ವಾರಸುದಾರರು–ವಿರುದ್ಧ–ಮಹಮ್ಮದ್ ಹನಿಫ (ಮೃತ ವಾರಸುದಾರರು)***[4], ಸರ್ವೋಚ್ಚ ನ್ಯಾಯಾಲಯವು, ಪೂರ್ವನ್ಯಾಯ ನಿರ್ಣಯದ ವಾದಕ್ಕೆ ಪರಿಣಾಮ ನೀಡುವ ಮುಂಚೆ ಈ ಮುಂದಿನ ಷರತ್ತುಗಳನ್ನು ರುಜುವಾತುಪಡಿಸತಕ್ಕದೆಂದು ಅಭಿಪ್ರಾಯಪಟ್ಟಿದೆ:

> "(1) ವ್ಯಾಜ್ಯ ನಡೆಸುವ ಪಕ್ಷಕಾರರು ಒಂದೇ ಆಗಿರತಕ್ಕದ್ದು;
>
> (2) ದಾವೆಯ ವಸ್ತು ವಿಷಯವು ಸಹ ಅದೇ ವಿಧವಾಗಿರತಕ್ಕದ್ದು;
>
> (3) ವಿಷಯವನ್ನು ಅಂತಿಮವಾಗಿ ಪಕ್ಷಕಾರರ ನಡುವೆ ನಿರ್ಧರಿಸತಕ್ಕದ್ದು; ಮತ್ತು

3. 2011(1) ಕೆಎಆರ್ ಎಲ್.ಜೆ.303

4. (1976) 4 ಎಸ್‌ಸಿಸಿ 780

(4) ದಾವೆಯನ್ನು ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದ ಮೂಲಕ ತೀರ್ಮಾನಿಸತಕ್ಕದ್ದು."

ಪೂರ್ವನ್ಯಾಯ ನಿರ್ಣಯದ ಪ್ರಶ್ನೆಯನ್ನು ನಿರ್ಧರಿಸುವ ಉತ್ತಮ ವಿಧಾನವೇನೆಂದರೆ, ಪಕ್ಷಕಾರರ ದಾವೆಯನ್ನು, ತಮ್ಮ ಹಿಂದಿನ ವಾದ–ಪ್ರತಿವಾದ ಪತ್ರಗಳಲ್ಲಿ ಅನುಕ್ರಮವಾಗಿ ಮುಂದಿಡಲಾದ ಆಧಾರದ ಮೇಲೆ ನಿರ್ಧರಿಸುವುದು ಮತ್ತು ಪೂರ್ವನ್ಯಾಯ ನಿರ್ಣಯದಂತೆ ಕಾರ್ಯನಿರ್ವಹಿಸಲು ಯಾವ ತೀರ್ಪುಗಳ ಮೂಲಕ ನಿರ್ಧರಿಸಲಾಯಿತು ಎಂಬುದನ್ನು ಕಂಡುಹಿಡಿಯುವುದು" ಎಂದು ಅಭಿಪ್ರಾಯಪಟ್ಟಿದೆ.

ಮುಂದುವರೆದು ವಾದ–ಪ್ರತಿವಾದಪತ್ರಗಳನ್ನು ಕೇವಲ ಈ ತೀರ್ಪಿನಲ್ಲಿ ನಮೂದಿಸಲಾದ ಆಪಾದನೆಗಳ ಕಂಠಪಾಠಗಳ ಮೂಲಕ ರುಜುವಾತುಪಡಿಸಲಾಗದು ಎಂಬುದನ್ನು ಈಗಾಗಲೇ ಇತ್ಯರ್ಥಪಡಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದೆ.

15. ಯಾವುದೇ ದಾವೆ ಅಥವಾ ವಿವಾದಾಂಶಕ್ಕೆ ಪೂರ್ವನ್ಯಾಯ ನಿರ್ಣಯದ ಪ್ರತಿಷೇಧದ ಅರ್ಜಿಯನ್ನು ಸಿಪಿಸಿಯ 11ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲು ಅತ್ಯಾವಶ್ಯಕ ಅಗತ್ಯತೆಗಳ ಪೂರೈಕೆಗಳು ಯಾವುವೆಂದರೆ: (1) ವಿಷಯವು, ನೇರವಾಗಿ ಮತ್ತು ಗಣನೀಯವಾಗಿ ಹಿಂದಿನ ದಾವೆಯಲ್ಲಿ ಹಾಗೂ ತರುವಾಯದ ದಾವೆಯಲ್ಲಿರುವ ವಿವಾದಾಂಶವಾಗಿರತಕ್ಕದ್ದು. (2) ಹಿಂದಿನ ದಾವೆಯು, ಅದೇ ಪಕ್ಷಕಾರರ ನಡುವೆ ಅಥವಾ ವ್ಯಕ್ತಿಗಳು ಅದರ ಅಡಿಯಲ್ಲಿ ಕ್ಲೇಮು ಮಾಡುವ ವ್ಯಕ್ತಿಗಳ ಮಧ್ಯೆ ಇರತಕ್ಕದ್ದು. (3) ಪಕ್ಷಕಾರರು, ಈ ಮುಂಚಿನ ದಾವೆಯಲ್ಲಿರುವ ಅದೇ ಶೀರ್ಷಿಕೆಯ ಅಡಿಯಲ್ಲಿ ವ್ಯಾಜ್ಯ ನಡೆಸತಕ್ಕದ್ದು, (4) ವಿಷಯವು, ತರುವಾಯದ ದಾವೆಯಲ್ಲಿರುವ ವಿವಾದಾಂಶದ ವಿಷಯವನ್ನು ಆಲಿಸಲಾಗಿದೆ ಮತ್ತು ಅಂತಿಮವಾಗಿ ಮೊದಲನೇ ದಾವೆಯಲ್ಲಿ ನಿರ್ಧರಿಸಲಾಗಿದೆ. (5) ಹಿಂದಿನ ದಾವೆಯನ್ನು ಅಧಿವಿಚಾರಣೆ ಮಾಡುತ್ತಿರುವ ನ್ಯಾಯಾಲಯವು, ಪ್ರಶ್ನಿಸಿರುವ ನಿರ್ದಿಷ್ಟ ವಿವಾದಾಂಶವನ್ನು ಅಧಿವಿಚಾರಣೆ ಮಾಡಲು ಸಕ್ಷಮವಾಗಿರಬೇಕು.

16. ***ವಿ. ರಾಜೇಶ್ವರಿ (ಶ್ರೀಮತಿ) –ವಿರುದ್ಧ– ಟಿ.ಸಿ. ಸರವಣಬವ್***, ಪೂರ್ವನ್ಯಾಯ ನಿರ್ಣಯದ ನಿಯಮಕ್ಕೆ ಸಂಬಂಧಪಟ್ಟಂತೆ, ಸರ್ವೋಚ್ಚ ನ್ಯಾಯಾಲಯವು, ಈ ವಾದದ ತಳಹದಿಯು, ವಾದ–ಪ್ರತಿವಾದ ಪತ್ರಗಳಲ್ಲಿರಬೇಕು ಮತ್ತು ವಿವಾದಾಂಶವನ್ನು ರೂಪಿಸಿರಬೇಕು ಹಾಗೂ ಅಧಿವಿಚಾರಣೆ ಮಾಡುವುದು ಮತ್ತು ತೆಗೆದುಕೊಂಡ ವಾದವು ಹಿಂದಿನ ಪ್ರಕರಣದಲ್ಲಿನ ವಾದ–ಪ್ರತಿವಾದ ಪತ್ರಗಳು, ವಿವಾದಾಂಶಗಳು ಮತ್ತು ತೀರ್ಪಿನ ಪ್ರತಿಗಳನ್ನು ಹಾಜರುಪಡಿಸುವುದರ ಮೂಲಕ ರುಜುವಾತುಪಡಿಸತಕ್ಕದ್ದು ಎಂದು ಅಭಿಪ್ರಾಯಪಟ್ಟಿದೆ. ಮುಂದುವರೆದು ಈ ತೀರ್ಪಿನಲ್ಲಿ ನಮೂದಿಸಲಾದ ವಾದ–ಪ್ರತಿವಾದ ಪತ್ರಗಳಲ್ಲಿ ಮಾಡಲಾದ ಕೇವಲ ಆಪಾದನೆಗಳ ಕಂಠಪಾಠಗಳ ಸಾರಾಂಶದ ಮೂಲಕ ವಾದ ಪ್ರತಿವಾದ ಪತ್ರಗಳನ್ನು ಊಹೆ ಮಾಡುವುದು ಅಪಾಯ ಸಂಭವವುಳ್ಳದ್ದಾಗಿದೆಯೆಂದು ಅಭಿಪ್ರಾಯಪಟ್ಟಿದೆ:

> "13. ........ ಹೇಳುವುದು ಅನಗತ್ಯವಾಗಿದ್ದು, ಹಿಂದಿನ ದಾವೆಯಲ್ಲಿರುವಂತೆ ವಾದ ಪ್ರತಿವಾದ ಪತ್ರಗಳು, ವಿವಾದಾಂಶಗಳು ಮತ್ತು ತೀರ್ಪುಗಳನ್ನು ಮಾತ್ರ ಪರಿಶೀಲಿಸುವುದರ ಮೂಲಕ ಕಂಡುಬಂದಿದೆ ಎಂದು ಹೇಳುವುದು ಅನಗತ್ಯವಾಗಿದೆ".

17. ಸರ್ವೋಚ್ಚ ನ್ಯಾಯಾಲಯವು ಸಿಪಿಸಿಯ ಕ್ರಮಾದೇಶ II ನಿಯಮ 2ಕ್ಕೆ ಆಧಾರವಾಗಿರುವ ಪೂರ್ವನ್ಯಾಯ ನಿರ್ಣಯ ಸಿದ್ಧಾಂತ ಮತ್ತು ನಿಯಮದ ನಡುವೆ ವ್ಯತ್ಯಾಸವಿರುವುದನ್ನು ***ಕುನ್‌ಜನ್ ನಾಯರ್ ಸಿವರಾಮನ್ ನಾಯರ್–ವಿರುದ್ಧ– ನಾರಾಯಣ ನಾಯರ್ ಮತ್ತು ಇತರರು*** [6], ಮೊಕದ್ದಮೆಯಲ್ಲಿ ಸ್ಪಷ್ಟಪಡಿಸಿದೆ ಮತ್ತು ಅದನ್ನು ಮುಂದಿನಂತೆ ಓದಿಕೊಳ್ಳುವುದು:

> "ಮೊದಲನೆಯದಾಗಿ, ತನ್ನ ಕ್ಲೇಮಿಗೆ ಪೂರಕವಾದ ಎಲ್ಲಾ ಸಾಧಕ ನೆಲೆಗಳನ್ನು ಅಗತ್ಯಪಡಿಸುವುದು ವಾದಿಯು

5. (2004) 1 ಎಸ್‌ಸಿಸಿ 551

6. (2004) 3 ಎಸ್‌ಸಿಸಿ 277

ಕರ್ತವ್ಯವೆಂಬುದನ್ನು ಒತ್ತಿ ಹೇಳುವುದಾದರೆ, ನಂತರದಲ್ಲಿ ವಾದಿಯು ಅದೇ ವ್ಯಾಜ್ಯ ಕಾರಣದಿಂದ ಉದ್ಭವಿಸುವ ಎಲ್ಲಾ ಪರಿಹಾರವನ್ನು ಕ್ಲೇಮು ಮಾಡಿಕೊಳ್ಳುವುದು ಅಗತ್ಯವಾಗಿರುತ್ತದೆ ಎಂದು ಹೇಳುತ್ತದೆ. ಕ್ರಮಾದೇಶ II ನಿಯಮ 2ರ ಆಧಾರವಾಗಿರುವ ತತ್ವದಿಂದ ಭಿನ್ನವಾಗಿರುವ ಪೂರ್ವನ್ಯಾಯ ನಿರ್ಣಯ ಸಿದ್ಧಾಂತವು, ಅದೇ ವ್ಯಾಜ್ಯ ಕಾರಣದಿಂದ ಉದ್ಭವಿಸಿದ ಎಲ್ಲಾ ಪರಿಹಾರಗಳ ಕ್ಲೇಮುವಿಗೆ ವಾದಿಯನ್ನು ತರುವಾಯ ಅಗತ್ಯಪಡಿಸಿರುವಾಗ, ತನ್ನ ಕ್ಲೇಮಿಗೆ ಪೂರಕವಾಗಿ, ಲಭ್ಯವಿರುವ ಎಲ್ಲಾ ಕಾರಣಗಳನ್ನು ಸಂಪೂರ್ಣವಾಗಿ ಉಪಯೋಗಿಸಲು ವಾದಿಗಳ ಕರ್ತವ್ಯದ ಮೇಲೆ ಹಿಂದೆ ಮಂಡಿಸಿರುವಂತೆ ಒತ್ತಿ ಹೇಳಲಾಗಿದೆ. ಆದೇಶ–II ದಾವೆಯನ್ನು ರೂಪಿಸುವುದಕ್ಕೆ ಸಂಬಂಧಪಟ್ಟ ಮತ್ತು ವಾದಿಯು ದಾವೆಯನ್ನು ರೂಪಿಸುವಲ್ಲಿ ತನ್ನ ಇಡೀ ಕ್ಲೇಮನ್ನು ಸೇರಿಸತಕ್ಕದೆಂದು ಹೇಳುತ್ತದೆ. ಇತರ ವಿಷಯಗಳ ಜೊತೆಗೆ, ಅದೇ ವ್ಯಾಜ್ಯ ಕಾರಣದ ಅದೇ ಸಂಬಂಧದಲ್ಲಿ ಪ್ರತಿಯೊಂದು ದಾವೆಯನ್ನು ಹೂಡಲು ಹಕ್ಕುಳ್ಳವರಾಗಿರುವುದು ಎಂದು ಉಪನಿಯುಮ (1)ರಲ್ಲಿ ಉಪಬಂಧಿಸಲಾಗಿದೆ. ಯಾವುದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ದಾವೆಯನ್ನು ತರುವುದಕ್ಕೆ ಯಾವುದೇ ಕ್ಲೇಮನ್ನು ಬಿಟ್ಟುಕೊಟ್ಟಿದ್ದಲ್ಲಿ, ಅವನು, ಯಾವುದೇ ತರುವಾಯದ ದಾವೆಯಲ್ಲಿನ ಪರಿಹಾರಕ್ಕೆ ಹಕ್ಕುಳ್ಳವನಾಗಿರುವುದಿಲ್ಲ. ಇದಲ್ಲದೆ, ಎಲ್ಲಾ ಅಥವಾ ಅದೇ ರೀತಿಯ ಯಾವುದೇ ಪರಿಹಾರಗಳಿಗಾಗಿ ಹೂಡಬಹುದಾದ ಅದೇ ವ್ಯಾಜ್ಯ ಕಾರಣದ ಸಂಬಂಧದಲ್ಲಿ ಒಂದಕ್ಕಿಂತ ಹೆಚ್ಚು ಪರಿಹಾರಗಳಿಗೆ ವ್ಯಕ್ತಿಯು ಹಕ್ಕುಳ್ಳವನಾಗಿರುತ್ತಾನೆಂಬುದನ್ನು (3)ನೇ ಉಪ–ನಿಯಮ ಉಪಬಂಧಿಸುತ್ತದೆ; ಆದರೆ ಅವನು ಅಂಥ ಪರಿಹಾರಕ್ಕಾಗಿ ಮನವಿ ಮಾಡುವುದನ್ನು ಕಡೆಗಣಿಸಿದರೆ,

ನ್ಯಾಯಾಲಯದ ಅನುಮತಿಯನ್ನು ಹೊರತುಪಡಿಸಿ, ಕಡೆಗಣಿಸಿದ ಪರಿಹಾರಕ್ಕಾಗಿ ಮನವಿ ಮಾಡಲು ಆತನಿಗೆ ಅನುಮತಿ ಇರುವುದಿಲ್ಲ."

18. ಪ್ರಸ್ತುತ ಪ್ರಕರಣದಲ್ಲಿ, 'ಮೊದಲನೇ ದಾವೆ'ಯ ವಾದಪತ್ರಗಳನ್ನು ಹಾಜರುಪಡಿಸದಿರುವುದರಿಂದ ಕೆಳ ನ್ಯಾಯಾಲಯಗಳು, ಯಾವುದೇ ಚರ್ಚೆ ನಡೆಸದೆ ಮತ್ತು ಕಾರಣಗಳನ್ನು ನಿರ್ಧರಿಸದೆ, ಸಿಪಿಸಿಯ 11ನೇ ಪ್ರಕರಣವನ್ನು ಅನ್ವಯಿಸಿವೆ ಮತ್ತು ಈ ದಾವೆಯು ಊರ್ಜಿತ ಯೋಗ್ಯವಾಗಿರುವುದಿಲ್ಲವೆಂದು ಏಕಏಕಿಯಾಗಿ ಮುಕ್ತಾಯಗೊಳಿಸಿವೆ.

19. ಎರಡನೇ ದಾವೆಗೆ ಲಿಖಿತ ಹೇಳಿಕೆಯನ್ನು ದಾಖಲು ಮಾಡಿರುವುದಿಲ್ಲ ಮತ್ತು ತತ್ಪರಿಣಾಮವಾಗಿ, ವಿವಾದಾಂಶಗಳನ್ನು ಎತ್ತಿರುವುದಿಲ್ಲ ಮತ್ತು ಅಧಿವಿಚಾರಣೆಯನ್ನು ನಡೆಸಿರುವುದಿಲ್ಲ ಎಂಬುದು ನಿರ್ವಿವಾದವಾದ ವಾದವಾಗಿರುತ್ತದೆ. ಸಿಪಿಸಿಯ ಕ್ರಮಾದೇಶ VII ನಿಯಮ 11ರ ಅಡಿಯಲ್ಲಿ ಅಧಿಕಾರ ಚಲಾವಣೆಯನ್ನು ವಾದಿಯನ್ನು ತಿರಸ್ಕರಿಸಲಾಗಿರುವುದಿಲ್ಲ ಅಥವಾ ಸಿಪಿಸಿಯ ಕ್ರಮಾದೇಶ XI ನಿಯಮ 21ರಡಿಯಲ್ಲಿ ದಸ್ತಾವೇಜುಗಳ ಬಹಿರಂಗಪಡಿಸುವ ಅಥವಾ ಪರಿಶೀಲನೆಯಲ್ಲಿ ಅಥವಾ ಪರಿಪಶ್ನೆಗಳಿಗೆ ಉತ್ತರಿಸುವ ಆದೇಶವನ್ನು ಪಾಲಿಸದಿರುವುದರಲ್ಲಿ ವಾದಿಯನ್ನು ತಿರಸ್ಕರಿಸಲಾಗಿರುವುದಿಲ್ಲ.

20. ಸಂಹಿತೆಯಲ್ಲಿ ನಿರ್ದಿಷ್ಟಪಡಿಸಲಾದ ಪ್ರಕ್ರಿಯೆಗೆ ಚಾಲನೆ ನೀಡುವ ಮೂಲಕ, ಅಧಿವಿಚಾರಣಾ ನ್ಯಾಯಾಲಯವು, ದಾವೆಯನ್ನು ವಜಾಗೊಳಿಸಿದೆ ಮತ್ತು ಮೊದಲನೇ ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯವು ಮಾಡಿರುವ ತಪ್ಪನ್ನು ಗಮನಿಸುವಲ್ಲಿ ವಿಫಲವಾಗಿರುವುದರಿಂದ, ಅಪೀಲನ್ನು ವಜಾಗೊಳಿಸಿದೆ. ನಿರ್ಣಯಗಳಲ್ಲಿ ಹೇಳಲಾದ ತತ್ವಗಳ ಮಾನದಂಡದ ಮೇಲೆ ಪ್ರಶ್ನಿತ ಆದೇಶವನ್ನು ಮತ್ತು ತೀರ್ಪನ್ನು ಪರೀಕ್ಷಿಸಲಾಗಿದೆ ಮತ್ತು ಮೇಲೆ ಹೇಳಲಾದ ಎಲ್ಲವೂ ಸಂಪೂರ್ಣವಾಗಿ ದೋಷದಿಂದ ಕೂಡಿದೆ ಎಂಬುದನ್ನು ಗಮನಿಸಲಾಗಿದೆ.

21. ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ ಮಾಡಿದ ಉಪಬಂಧಗಳ ನಿಬಂಧನೆಗಳಲ್ಲಿರುವಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ನಿರ್ವಹಿಸುವ ಮೂಲಭೂತ ನಿಯಮಗಳನ್ನು ಎರಡೂ ಕೆಳ ನ್ಯಾಯಾಲಯಗಳು ದೃಷ್ಟಿಯಲ್ಲಿಟ್ಟುಕೊಂಡಿರುವುದಿಲ್ಲ ಮತ್ತು ಅನುಸರಿಸಿರುವುದಿಲ್ಲ. ಈ ಮೊಕದ್ದಮೆಯು ಲೋಪದಿಂದ ಕೂಡಿರುವುದರಿಂದ, ಅನುಕ್ರಮವಾಗಿ ಪ್ರಶ್ನಿತ ಆದೇಶ ಮತ್ತು ತೀರ್ಪು ನಿರರ್ಥಕವಾಗಿವೆ. ಆದ್ದರಿಂದ, ಅದನ್ನು ಸಮರ್ಥಿಸಿಕೊಳ್ಳಲಾಗದು.

ತತ್ಪರಿಣಾಮವಾಗಿ, ಅಪೀಲಿಗೆ ಅನುಮತಿ ನೀಡಿ, ಪ್ರಶ್ನಿತ ಆದೇಶ ಮತ್ತು ತೀರ್ಪನ್ನು ರದ್ದುಗೊಳಿಸಲಾಗಿದೆ. ಓ.ಎಸ್. ಸಂಖ್ಯೆ: 277/2014ನ್ನು ಕಾನೂನಿಗೆ ಅನುಸಾರವಾಗಿ ತೀರ್ಮಾನಿಸಲಾಗದ ಕಾರಣ ಅಧಿವಿಚಾರಣಾ ನ್ಯಾಯಾಲಯದ ಕಡತಕ್ಕೆ ಹಿಂದಿರುಗಿಸಲಾಗಿದೆ. ಈ ಪ್ರಕರಣದ ವ್ಯವಹರಣೆಗಳನ್ನು ತ್ವರಿತಗೊಳಿಸುವುದಕೋಸ್ಕರ ಪಕ್ಷಕಾರರು, ದಿನಾಂಕ: 23.07.2016 ರಂದು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿ ಮುಂದಿನ ಆದೇಶಗಳನ್ನು ತೆಗೆದುಕೊಳ್ಳುವಂತೆ ನಿರ್ದೇಶಿಸಲಾಗಿದೆ.

ಪ್ರತಿವಾದಿಗಳಿಗೆ, ದಿನಾಂಕ: 27.08.2016ಕ್ಕೆ ಮುಂಚೆ, ಲಿಖಿತ ಹೇಳಿಕೆಯನ್ನು ದಾಖಲು ಮಾಡಲು ಅನುಮತಿಸಲಾಗಿದೆ. ಲಿಖಿತ ಹೇಳಿಕೆಯನ್ನು ದಾಖಲು ಮಾಡಿದ ದಿನಾಂಕದಿಂದ ಎರಡು ವಾರಗಳ ಅವಧಿಯೊಳಗೆ ವಿವಾದಾಂಶಗಳನ್ನು, ಎತ್ತತಕ್ಕದ್ದು. ಪಕ್ಷಕಾರರು, ಬಹುತೇಕ 16 ವರ್ಷಗಳಿಂದ, ನ್ಯಾಯಾಲಯದ ಮುಂದೆ, ಇರುವುದರಿಂದ ಆದಷ್ಟು ಬೇಗ ದಾವೆಯನ್ನು ತೀರ್ಮಾನಿಸುವುದು ಅಗತ್ಯವಾಗಿದೆ. ಹಾಗಾಗಿ, ವಾದಿಯು, ದಾವೆಯ ವಿಚಾರಣೆಗೆ ಒಳಪಡುವ ದಿನಾಂಕದಿಂದ 6 ವಾರಗಳ ಅವಧಿಯೊಳಗೆ ಆಕೆಯ ಕಡೆಯ ಸಾಕ್ಷ್ಯವನ್ನು ಮಂಡಿಸತಕ್ಕದ್ದು ಮತ್ತು ಅದನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಪ್ರತಿವಾದಿಗಳು, ವಾದಿಯು ದಾವೆಯನ್ನು ಮುಕ್ತಾಯಗೊಳಿಸಿದ ದಿನಾಂಕದಿಂದ 6 ವಾರಗಳ ಅವಧಿಯೊಳಗೆ ತಮ್ಮ ಕಡೆಯ ಸಾಕ್ಷ್ಯವನ್ನು ಮಂಡಿಸತಕ್ಕದ್ದು ಮತ್ತು ಪೂರ್ಣಗೊಳಿಸತಕ್ಕದ್ದು. ವಿಚಾರಣೆ ಮುಗಿದ

ದಿನಾಂಕದಿಂದ ಎರಡು ತಿಂಗಳೊಳಗಾಗಿ ದಾವೆಯನ್ನು ತೀರ್ಮಾನಿಸತಕ್ಕದ್ದು ಇದಕ್ಕೆ ಅನುಕೂಲ ಕಲ್ಪಿಸಲು ಪಕ್ಷಕಾರರು, ಯಾವುದೇ ವಿಳಂಬ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳತಕ್ಕದಲ್ಲ ಎಂಬುದನ್ನು ಅಧಿವಿಚಾರಣಾ ನ್ಯಾಯಾಲಯವು ಗಮನಿಸತಕ್ಕದ್ದು, ಮತ್ತು ಅನಗತ್ಯವಾದ ತೀರ್ಪುಗಳನ್ನು ತಿರಸ್ಕರಿಸತಕ್ಕದ್ದು.

ಈ ಪ್ರಕರಣದ ಗುಣಾರ್ಹತೆಗಳ ಮೇಲೆ, ಅದರಲ್ಲಿರುವಂತೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿರುವುದಿಲ್ಲ ಮತ್ತು ಉಭಯ ಪಕ್ಷಕಾರರ ಎಲ್ಲಾ ವಾದಗಳನ್ನು ಮತ್ತು ಪ್ರತಿವಾದಗಳು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಮುಕ್ತವಾಗಿ ಮಂಡಿಸಬಹುದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ ಪಕ್ಷಕಾರರು ತಮ್ಮ ವೆಚ್ಚಗಳನ್ನು ತಾವೇ ಭರಿಸತಕ್ಕದ್ದು.